# 9

# “ಪರಿಪೂರ್ಣನಾಗಿರು” (1)

... ಯಾವುದೇ ಪಾಪಿ ಮನುಷ್ಯನಿಗೆ ಪರಿಶುದ್ಧ ದೇವರ ಸನ್ನಿಧಿಯಲ್ಲಿ ನಿಲ್ಲಲು ಹಕ್ಕಾಗಲೀ ಇಲ್ಲವೇ ಕಾರಣವಾಗಲೀ ಇರುವದಿಲ್ಲ.

... ಅಪರಿಪೂರ್ಣನಾದ ಯಾವನೂ ಪರಿಶುದ್ಧನಾದ ದೇವರ ಸನ್ನಿಧಿಯಲ್ಲಿ ಬರಲು ಅಪ್ಪಣೆ ಹೊಂದಿರುವದಿಲ್ಲ.

... ನಾನು ಅಪರಿಪೂರ್ಣನಾಗಿದ್ದೇನೆ; ಆದುದರಿಂದ ನಾನು ನಂಬಿಕೆಯಿಂದ ರಕ್ಷಿಸಲ್ಪಟ್ಟಿದ್ದೇನೆ.

... ನನ್ನಷ್ಟಕ್ಕೆ ನಾನೇ ರಕ್ಷಿಸಿಕೊಳ್ಳಲಾರೆನು; ಆದುದರಿಂದ ನಾನು ನಂಬಿಕೆಯಿಂದ ರಕ್ಷಿಸಲ್ಪಟ್ಟಿದ್ದೇನೆ.

... ಒಂದು ನಿಮಿಷ ನಾನು ಪರಿಪೂರ್ಣನಾಗಿರಲಾರೆನು; ನಾನು ಅನುದಿನವೂ ನಂಬಿಗಸ್ತನಾಗಿರಬಲ್ಲೆನು.

... ದೇವರು ಶಿಲುಬೆಯ ಬಳಿಯಲ್ಲಿ ಪ್ರತಿಯೊಂದು ಸಾಹಸ ಮಾಡಿದನು; ನಾವು ನಂಬಿಕೆಯಿಂದ ಪ್ರತಿಯೊಂದು ಸಾಹಸ ಮಾಡುವೆವು.

ನಾವು “ಪರಿಪೂರ್ಣರಾಗಿ” ಇರದೇ ಇರುವುದು ಒಂದು ಸಂಗತಿಯಾಗಿದೆ. ಹೀಗಿದ್ದರೂ, “ಆದದರಿಂದ ಪರಲೋಕದಲ್ಲಿರುವ ನಿಮ್ಮ ತಂದೆಯು ಯಾವ ದೋಷವೂ ಇಲ್ಲದವನಾಗಿರುವಂತೆ ನೀವೂ ದೋಷವಿಲ್ಲದವರಾಗಿರ್ರಿ” (ಮತ್ತಾಯ 5:48) ಎಂದು ದೇವರು ಆಜ್ಞಾಪಿಸಿದ್ದಾನೆ. “ಪರಿಪೂರ್ಣರಾಗಿರ್ರಿ!” ಪರ್ವತದ ಮೇಲಿನ ಪ್ರಸಂಗವು, ಪ್ರಸಂಗಿಸಿದ ಪ್ರಸಂಗಗಳಲ್ಲಿ ಅತೀ ದೊಡ್ಡದಾಗಿದೆ (ಯೇಸು, ಮತ್ತಾಯ 5-7). ಪರ್ವತದ ಮೇಲಿನ ಪ್ರಸಂಗದಲ್ಲಿ ಪ್ರಸ್ತುತಪಡಿಸಿದ ಜೀವದ ಮಾರ್ಗವು ಜೀವಿಸುವದಕ್ಕೆ ಕೇವಲ ವ್ಯಾವಹಾರಿಕವಾದ ಮಾರ್ಗವಾಗಿದೆ. ನಾವು ಹೇಗೆ ಇರಬೇಕೆಂಬುದನ್ನು ಧನ್ಯವಾಚಕಗಳಲ್ಲಿ ಯೇಸುವು ಹೇಳಿದನು; ಮತ್ತು ಹೇಗೆ ವರ್ತಿಸಬೇಕೆಂಬುದು ಹೇಳಿದನು. ಇಂದು ಜನರಿಗೆ ಜೀವನದ ವ್ಯಾವಹಾರಿಕ ತತ್ವಜ್ಞಾನದ ಅಗತ್ಯತೆಯಿರುತ್ತದೆ. ದೇವರೊಂದಿಗಿನ ನಮ್ಮ ಅನುದಿನದ ನಡತೆಯು ಸತತವಾಗಿ ನಮ್ಮ ಜೀವಿತಗಳ ಗುರಿಯನ್ನು ಪುನಃ ನಿರೂಪಿಸುತ್ತದೆ. ಒಬ್ಬ ವ್ಯಕ್ತಿಯು ಸುವಾರ್ತೆಯನ್ನು ಕೇಳುತ್ತಾನೆ ಮತ್ತು ವಿಧೇಯನಾಗುತ್ತಾನೆ. ಅವನು ರಕ್ಷಿಸಲ್ಪಡುತ್ತಾನೆ, ಕ್ರೈಸ್ತನಾಗುತ್ತಾನೆ, ದೇವರ ಸಭೆಗೆ ಕೂಡಿಸಲ್ಪಡುತ್ತಾನೆ. ಆ ನೂತನ ಜನನದಿಂದ, ಈ ಪ್ರಶ್ನೆಗಳು ಅವನನ್ನು ತುಂಬಿಕೊಳ್ಳುತ್ತವೆ: “ಕ್ರೈಸ್ತನಾಗುವುದು ಎಂಬುದರ ಅರ್ಥ ಏನಾಗುತ್ತೆದೆ? ನಾನು ಏನಾಗುತ್ತೇನೆ? ನಾನು ಏನು ಮಾಡಬೇಕು? ಹೇಗೆ, ಆಗ ನಾನು ಜೀವಿಸುವೆನು?” ಯೇಸುವು ದೇವರ ಮಟ್ಟವನ್ನು ಕೆಳಗಿಳಿಸಲು ಬರಲಿಲ್ಲ; “ಪರಿಪೂರ್ಣರಾಗಿರಿ!” ಪರ್ವತ ಪ್ರಸಂಗದಲ್ಲಿ ಮೂಲ ಹೇಳಿಕೆಯು “ಪರಿಪೂರ್ಣತೆಯುಳ್ಳವರಾಗಿರಿ” ಎಂಬುದಾಗಿರುತ್ತದೆ. ಧನ್ಯವಾಚಕಗಳು ಮೊದಲು ಮತ್ತು ಅನಂತರದ ಕೃತ್ಯಗಳು ಈ ವಿಚಾರವನ್ನು ವಿಸ್ತರಿಸುತ್ತವೆ. ನಾವು ಅಪರಿಪೂರ್ಣರಾಗಿದ್ದೇವೆ. ನಮ್ಮಲ್ಲಿಯೇ ನಾವು ಯುದ್ಧವನ್ನು ಜಯಿಸಲು ಅಸಮರ್ಥರಾಗಿದ್ದೇವೆ. ನಾವು ಯೋಚಿಸಲು ಧೈರ್ಯಗೊಳ್ಳದಷ್ಟು - ದೇವರ ಮುಂದೆ *ಪರಿಪೂರ್ಣರಾಗಿರುವದನ್ನು* ಯೋಚಿಸದಷ್ಟು ನಾವು ಮಾಡಲಾರದಂಥದ್ದನ್ನು ದೇವರು ಮಾಡುತ್ತಾನೆ! *“I can be like God!” Amazing grace!*

ತಾನು ಇತರರಿಗಿಂತ ಹೆಚ್ಚು ಉತ್ತಮನಾಗಿದ್ದೇನೆಂದು ಫರಿಸಾಯರು ಯೋಚಿಸಿದರು (ಲೂಕ 18). "ದೇವರಂತಿರಲು" ಕ್ರೈಸ್ತರು ಅವಕಾಶವನ್ನು ಹೊಂದಿದ್ದಾರೆ. ಎಂಥಾ ಗುರಿ! ದೇವರನ್ನು ಅನುಸರಿಸಬೇಕೆಂದು ಪೌಲನು ಎಫೆಸದವರಿಗೆ ಹೇಳಿದನು (ಎಫೆಸ 5:1). ನಾನು ದೇವರ ಸ್ವರೂಪದಲ್ಲಿ ಉಂಟುಮಾಡಲ್ಪಟ್ಟವನಾಗಿದ್ದೇನೆ (ಆದಿಕಾಂಡ 1). ನನ್ನ ಗುರಿಯು ದೇವರಂತಾಗುವುದು ಆಗಿದೆ! "ಪರಿಪೂರ್ಣ" ಎಂಬ ಪದವನ್ನು ತಳ್ಳಿಬಿಡಬೇಡಿರಿ. ಹೌದು, ಅದರ ಅರ್ಥ "ಪ್ರೌಢ, ಸಂಪೂರ್ಣ, ಸಾಂಬಂಧಿಕ ಪರಿಪೂರ್ಣತೆಯನ್ನು ಸಾಧಿಸುವುದು" ಎಂದಾಗಬಹುದು. ಹೀಗಿದ್ದರೂ, ಒಬ್ಬ ಭಾಷಣಕಾರನು ತನ್ನ ಮಾತನ್ನು ನಿರೂಪಿಸಲು ಅವಕಾಶ ಹೊಂದಿರುವನು, ಮತ್ತು ಯೇಸು ಹೀಗೆ ಹೇಳಿದನು, "*ದೇವರಂತೆ* ಪರಿಪೂರ್ಣರಾಗಿರಿ" (ಒತ್ತಿ ಹೇಳಿದ್ದು ನನ್ನದು). ದೇವರು ದೇವರಾಗಿದ್ದಾನೆ! "ವಯಸ್ಕನಂತೆ" ಇಲ್ಲವೇ "ಪ್ರೌಢ"ನಂತೆ ಅಲ್ಲ, ಆದರೆ ಆತನು ಪರಿಪೂರ್ಣನಾಗಿದ್ದಾನೆ. ಆತನು "ಪರಿಶುದ್ಧನು, ಪರಿಶುದ್ಧನು, ಪರಿಶುದ್ಧನು" ಆಗಿದ್ದಾನೆ. ಆತನು ಪರಿಶುದ್ಧನಾದ ದೇವರಿಗೆ ಅಪರಿಪೂರ್ಣವಾದ ಯಾವುದೇ ವ್ಯಕ್ತಿಯೊಂದಿಗೆ ಇಲ್ಲವೇ ಯಾವುದೇ ಸಂಗತಿಯೊಂದಿಗೆ ಯಾವುದೇ ಸಂಬಂಧವಿರುವದಿಲ್ಲ. ದೇವರೊಂದಿಗೆ ನಡೆಯುವವರು ಪರಿಪೂರ್ಣರಾಗಿರತಕ್ಕದ್ದು! ದೇವರೊಂದಿಗೆ ನಿಮ್ಮ ಸಂಬಂಧವನ್ನು ಬಿಟ್ಟು ಬೇರೆ ಯಾವುದರ ಬಗ್ಗೆ ಜಾಗರೂಕತೆಯಿಂದ ಇರಬೇಡಿರಿ.

## ನಮ್ಮ ಗುರಿಯು ಪರಿಪೂರ್ಣತೆಯಾಗಿರುತ್ತದೆ!

ನಮ್ಮಲ್ಲಿ ಹೆಚ್ಚಾದವರಿಗೆ ನಮ್ಮ ಗುರಿಯು ಯಾವುದು ಎಂಬುದನ್ನು ತಿಳಿದಿರುವದಿಲ್ಲ. ನಮ್ಮ ಗುರಿಯು ಪರಿಪೂರ್ಣತೆಯಾಗಿರುತ್ತದೆ. ಪರಿಪೂರ್ಣನಾದ ದೇವರು ಪರಿಪೂರ್ಣತೆಯನ್ನು ಕೇಳುತ್ತಾನೆ. ಪರಿಪೂರ್ಣತೆಯು ಐಚ್ಛಿಕವಾದ ಇಲ್ಲವೇ ಬದಿಗಿಡುವಂಥದ್ದು ಆಗಿರುವದಿಲ್ಲ. ನಮ್ಮ ಗುರಿಯು ಪರಲೋಕದೊಳಗೆ ಪ್ರವೇಶಿಸುವಂಥದ್ದಾಗಿರುವದಿಲ್ಲ; ನಮ್ಮ ಗುರಿಯು ನಮ್ಮೊಳಗೆ ಪರಲೋಕವನ್ನು ತರುವಂಥದ್ದಾಗಿರುತ್ತದೆ. ಪರಿಪೂರ್ಣತೆಯು ಯಾವಾಗಲೂ ದೇವರ ಗುರಿಯಾಗಿರುತ್ತದೆ. ಆದಾಮನು ಸೋತು ಹೋದನು (ಆದಿಕಾಂಡ 3). ಪರಿಪೂರ್ಣವಾಗಿ ಮಾಡುವುದಕ್ಕೆ ಧರ್ಮಶಾಸ್ತ್ರವು ಸೋತುಹೋಯಿತು (ಇಬ್ರಿಯ 7:19; 10:1). ಕ್ರಿಸ್ತನು, ಪರಿಪೂರ್ಣ ಮನುಷ್ಯನು, ಪರಿಪೂರ್ಣ ಯಜ್ಞ ಅರ್ಪಿಸಿದನು (ಇಬ್ರಿಯ 5:9; 10:12, 14). ಪರಿಹಾರವು "ನಂಬಿಕೆಯನ್ನು ಹುಟ್ಟಿಸುವವನೂ ಪೂರೈಸುವವನೂ ಆಗಿರುವ ಯೇಸುವಿನ ಮೇಲೆ ದೃಷ್ಟಿಯಿಡುವುದು" (ಇಬ್ರಿಯ 12:2) ಎಂದು ಇಬ್ರಿಯರಿಗೆ ಬರೆದ ಪತ್ರಿಕೆಯು ಹೇಳುತ್ತದೆ. "ಸಂಪೂರ್ಣನಾಗಿರಬೇಕು" ಎಂದು ಯೇಸುವು ಐಶ್ವರ್ಯವಂತ ಯೌವನಸ್ಥನಿಗೆ ಹೇಳಿದನು (ಮತ್ತಾಯ 19:21; KJV). "ಸಂಪೂರ್ಣನಾಗಿರುವುದು" ಎಂಬ ತತ್ವವು ವಿವಿಧ ರೂಪಗಳಲ್ಲಿ ಹೊಸ ಒಡಂಬಡಿಕೆಯಲ್ಲಿ ಮೂವತ್ತಕ್ಕಿಂತಲೂ ಹೆಚ್ಚು ಸಲ ಕಂಡುಬರುತ್ತದೆ. ಪರಲೋಕವನ್ನು ಕುರಿತು ಸುಮಾರು ಒಂದು ಡಜನಿನಷ್ಟು ಸಲ ನಾವು ಪ್ರೋತ್ಸಾಹಿಸಲ್ಪಟ್ಟಿದ್ದೇವೆ. "ಭಾಗಶಃ ಕ್ರೈಸ್ತತ್ವವಿರುವದಿಲ್ಲ." ಪರಿಪೂರ್ಣರಾಗಿರುವಂಥದ್ದು ಪೌಲನ ಅಪೇಕ್ಷೆಯಾಗಿತ್ತು (ಫಿಲಿಪ್ಪಿ 3:12-15). ಅವನು ಅದಕ್ಕೆ ತಲುಪಿರಲಿಲ್ಲ. ಪೌಲನ ಅಪೇಕ್ಷೆಯು ಪ್ರತಿಯೊಬ್ಬ ಮನುಷ್ಯನನ್ನು ಕ್ರಿಸ್ತ ಯೇಸುವಿನಲ್ಲಿ ಪರಿಪೂರ್ಣವಾಗಿ ಸಮರ್ಪಿಸಬೇಕೆಂಬುದಾಗಿತ್ತು (ಕೊಲೊಸ್ಸೆ 1:27, 28; KJV). ಪರಿಶುದ್ಧ ಬರಹಗಳು ದೇವರ ಜನರನ್ನು ಪರಿಪೂರ್ಣವಾಗಿ ಉತ್ಪಾದಿಸುತ್ತವೆ (2 ತಿಮೊಥೆ 3:15-17). ಪ್ರತಿಯೊಂದು ಒಳ್ಳೇ ಕಾರ್ಯದಲ್ಲಿ ನಾವು ಪರಿಪೂರ್ಣರಾಗಿರಬೇಕೆಂದು ದೇವರು ಬಯಸುತ್ತಾನೆ (ಇಬ್ರಿಯ 13:21). ಪ್ರೀತಿಯು "ಪರಿಪೂರ್ಣತೆಯ" ಬಂಧನವಾಗಿದೆ (ಕೊಲೊಸ್ಸೆ 3:14;

KJV). ದೇವರ ವಾಕ್ಯವನ್ನು ಕೈಕೊಳ್ಳುವವರು ದೇವರ ಪ್ರೀತಿಯನ್ನು ಪರಿಪೂರ್ಣವಾದದ್ದನ್ನಾಗಿ ಕಂಡುಕೊಳ್ಳುತ್ತಾರೆ (1 ಯೋಹಾನ 2:5). ಸಹೋದರರು ಪರಿಪೂರ್ಣರಾಗಿ, ಸಂಪೂರ್ಣವಾಗಿ ನಿಲ್ಲಬೇಕೆಂದು ಪೌಲನು ಪ್ರಾರ್ಥಿಸಿದನು (ಕೊಲೊಸ್ಸೆ 4:12; KJV). ವಿಧೇಯನು ಪರಿಪೂರ್ಣ ನಂಬಿಕೆಯನ್ನು ಸಾಧಿಸುತ್ತಾನೆ (ಯಾಕೋಬ 2:22). ಕ್ರೈಸ್ತ ಜೀವನದ ಗುರಿಯು ಪರಿಪೂರ್ಣನಾಗಿ ಸಂಪೂರ್ಣನಾಗಿರುವುದು, ಯಾವ ಕೊರತೆಯಿಲ್ಲದವನಾಗಿರುವುದು ಆಗಿದೆ. ದೇವರು ಮಾತ್ರವೇ ಪರಿಪೂರ್ಣನನ್ನಾಗಿ ಮಾಡುತ್ತಾನೆ. ವಿಪರೀತವಾಗಿ, ದೇವರು ಮುರಿಯಲ್ಪಟ್ಟವರೊಂದಿಗೆ, ಸಹಾಯಹೀನರೊಂದಿಗೆ, ಬಲಹೀನರೊಂದಿಗೆ ಕಾರ್ಯ ಮಾಡುತ್ತಾನೆ. "ನನ್ನ ಕೃಪೆಯೇ ನಿನಗೆ ಸಾಕು; ಬಲಹೀನತೆಯಲ್ಲಿಯೇ ಬಲವು ಪೂರ್ಣಸಾಧಕವಾಗುತ್ತದೆ" (2 ಕೊರಿಂಥ 12:9ಎ). ನನ್ನಲ್ಲಿ ದೇವರು ಪರಿಪೂರ್ಣನಾಗಿದ್ದಾನೆ. ನನ್ನಲ್ಲಿ ಕ್ರಿಸ್ತನು ಪರಿಪೂರ್ಣನಾಗಿದ್ದಾನೆ. ನನ್ನಲ್ಲಿ ಪರಿಶುದ್ಧಾತ್ಮನು ಪರಿಪೂರ್ಣನಾಗಿದ್ದಾನೆ. (ಅಧ್ಯಾಯ 10ರಲ್ಲಿ ಇನ್ನೂ ಹೆಚ್ಚು ಇದೆ.)

◇◇◇◇◇◇◇◇

# ಮನಸ್ಸಾಕ್ಷಿ

## 1 ಕೊರಿಂಥ 8:7-13; 10:25-30

*"ಇದರ ದೆಸೆಯಿಂದ ದೇವರ ವಿಷಯದಲ್ಲಿಯೂ ಮನುಷ್ಯರ ವಿಷಯದಲ್ಲಿಯೂ ನಾನು ನಿರ್ದೋಷಿ ಎಂದು ಸಾಕ್ಷಿ ಹೇಳುವ ಮನಸ್ಸು ನನಗೆ ಯಾವಾಗಲೂ ಇರಬೇಕೆಂದು ಅಭ್ಯಾಸ ಮಾಡಿಕೊಳ್ಳುತ್ತೇನೆ" (ಅಪೊಸ್ತಲರ ಕೃತ್ಯಗಳು 24:16).*

Erle Stanley Gardner[1], ಅವರ ಕ್ಷಮೆ ಕೇಳಿ, ಮಾನವ ಮನಸ್ಸಾಕ್ಷಿಯು "The Court of Last Resort" ಆಗಿದೆಯೆಂದು ಯೋಚಿಸುತ್ತೇನೆ. ದೇವರು ಇನ್ನೂ ದೇವರಾಗಿರುವನು ಎಂದು ಜ್ಞಾಪಿಸಲು ಮನುಷ್ಯನಲ್ಲಿ ಮನಸ್ಸಾಕ್ಷಿಯನ್ನು ಇಟ್ಟಿದ್ದಾನೆ. ನೈತಿಕ ಮಾನವನ ಉನ್ನತ - ಮಹಿಮೆಯು ಮನಸ್ಸಾಕ್ಷಿಯಾಗಿದೆ. ಪ್ರಾಣಗಳಿಗೆ ಸಹಜ ಪ್ರವೃತ್ತಿಗಳಿವೆ, ಆದರೆ ಅವುಗಳಿಗೆ ಮನಸ್ಸಾಕ್ಷಿ ಇರುವದಿಲ್ಲ. ನಾಯಿಯು ನಾಯಿಯೇ ಆಗಿರುತ್ತದೆ. ಅದು ಬೆಕ್ಕು ಆಗಿರಲು ಆಯ್ಕೆ ಮಾಡಿಕೊಳ್ಳಲಾರದು. ಪ್ರಾಣಿಗಳು ನೀತಿಯುಳ್ಳವುಗಳಾಗಲೀ ಇಲ್ಲವೇ ಅನೀತಿಯುಳ್ಳವುಗಳಾಗಲೀ ಆಗಿರುವದಿಲ್ಲ - ಅವು ನೀತಿ ಬಾಹ್ಯವಾದವುಗಳಾಗಿರುತ್ತವೆ. ಮನುಷ್ಯನು ನೀತಿಯುಳ್ಳವನಾಗಿದ್ದಾನೆ. ಅವನಿಗೆ ಚಿತ್ತವಿದೆ, ಒಂದು ಆಯ್ಕೆಯಿದೆ. ಮನುಷ್ಯನು "ಭಕ್ತ"ನಾಗಿರಬಹುದು ಇಲ್ಲವೇ "ಸೈತಾನ"ನಾಗಿರಬಹುದು. ಹೀಗಿದ್ದರೂ, ದೇವರು ಮನುಷ್ಯನನ್ನು ಮರೆತಿರುವದಿಲ್ಲ; ಒಳ್ಳೆಯದನ್ನು ಪ್ರೋತ್ಸಾಹಿಸಲು ಮತ್ತು ಪಾಪದ ಮೇಲೆ ವ್ಯಕ್ತಿಯ ಅಪರಾಧವನ್ನು ಶಿಕ್ಷಿಸಲು ಕಟ್ಟಲ್ಪಟ್ಟ ಎಚ್ಚರಿಕೆಯ ಪದ್ಧತಿಯನ್ನು ಆತನು ಸೃಷ್ಟಿಸಿದನು. ಅಪರಾಧವು ವೈರಿಯಾಗಿರುವದಿಲ್ಲ, ಆದರೆ ಸ್ನೇಹಿತನಾಗಿರುತ್ತದೆ, ಪ್ರಸಿದ್ಧ ಮನೋವಿಜ್ಞಾನದ ನಂಬಿಕೆಗಳಿಗೆ ವಿರುದ್ಧವಾಗಿ, ಅಪರಾಧವು ರಕ್ಷಣೆಯಲ್ಲಿ ಪ್ರಥಮ ಹೆಜ್ಜೆಯಾಗಿರತಕ್ಕದ್ದು. ನಮ್ಮ ಪಾಪವನ್ನೂ ಅಪರಾಧವನ್ನೂ ತೊಳೆಯಬಲ್ಲ ಒಂದೇ ಸಂಗತಿಯು ಕ್ರಿಸ್ತನ ರಕ್ತವಾಗಿರುತ್ತದೆ.

ದೇವರು, ಬೈಬಲ್, ಮತ್ತು ಪರಿಶುದ್ಧ ಜೀವಿಸುವಿಕೆಯಂತೆ ಮನಸ್ಸಾಕ್ಷಿಯು ಹಂಬಲವಾಗಿದೆ, ಕೇವಲ ತಮಾಷೆಯಾಗಿದೆ:

> "ಮನಸ್ಸಾಕ್ಷಿಯು ಸಂದರ್ಶಿಸುವ ಎಂದೂ ತೀರದ ಸಂದರ್ಶನವು ಅತ್ತೆಯಾಗಿರುತ್ತದೆ."
>
> "ಮನಸ್ಸಾಕ್ಷಿಯು ನಿನ್ನ ಸಹೋದರಿಯು ಹೇಳುವದಕ್ಕಿಂತ ಮೊದಲು ನಿನ್ನ ತಾಯಿಗೆ ಹೇಳುವಂತೆ ನಿನ್ನನ್ನು ಮಾಡುತ್ತದೆ."
>
> "ಮನಸ್ಸಾಕ್ಷಿಯು ಕೆಲವು ಸಲ ತಣ್ಣನೆಯ ಪಾದಗಳಿಗೆ ಹೋಗತಕ್ಕ ಗೌರವವನ್ನು ಹೊಂದಿಕೊಳ್ಳುತ್ತದೆ."

ಮನಸ್ಸಾಕ್ಷಿಯು ಮರೆಯಲ್ಪಡಬಾರದು ಇಲ್ಲವೇ ಒಂದು ಹಾಸ್ಯಕ್ಕೆ ಕಡಿಮೆಯಾಗುವಂತೆ ಮಾಡಲ್ಪಡಬಾರದು. ಇತ್ತೀಚೆಗಿನ ವರ್ಷಗಳಲ್ಲಿ ನಡೆದ ದುಃಖಕರ ವಾದ ಶಾಲೆಯ ಗುಂಡಿನ ಸುರಿಮಳೆಯಲ್ಲಿ, ಸ್ಪಷ್ಟವಾಗಿ ತಪ್ಪಿಹೋಗಿರುವ ಎರಡು ಪದಗಳು ಯಾವವು? "*ಪಾಪ*" ಮತ್ತು "*ಮನಸ್ಸಾಕ್ಷಿ*"! ನಿರಾಶೆಯಲ್ಲಿ ನಮ್ಮ ಕೈಗಳನ್ನು ಹಿಸುಕಿಕೊಳ್ಳು ತ್ತೇವೆ! ಹೆಚ್ಚಾದವರು ಬುದ್ಧಿವಂತಿಕೆಯನ್ನು ಅವಮಾನಪಡಿಸಿದರೂ "ಒಳ್ಳೇ ದನ್ನು ಮಾಡುವವರು" ಎಲ್ಲಾ ರೀತಿಯ ಪರಿಹಾರಗಳನ್ನು ಹೊಂದಿಕೊಂಡಿರುತ್ತಾರೆ. ಶಾಲೆಗಳಲ್ಲಿ ಹೆಚ್ಚು ಬಂದೂಕು ನಿಯಮಗಳು ಮತ್ತು ಮೆಟಲ್ ಡಿಟೆಕ್‌ಟ್‌ರುಗಳು ಇರುವವು. ಇವು "Band-Aids" ಆಗಿರುವವು, ವಾಸಿ ಯಾಗುವಿಕೆಗಳಾಗಿರುವದಿಲ್ಲ! ರೋಗ ಲಕ್ಷಣಗಳಿಗೆ ಚಿಕಿತ್ಸೆ ದೊರೆಯುತ್ತದೆ; ಮತಗಳು ಕೊಂಡುಕೊಳ್ಳಲ್ಪಡುತ್ತವೆ; ಹಿಂಸೆಯು ಮುಂದುವರಿಸಲ್ಪಡುತ್ತದೆ. ಅಂಥ ಹಿಂಸೆಯು "ಸರಿಯಾದದ್ದರ ಮತ್ತು ತಪ್ಪಾದದ್ದರ" (ಪಾಪದ ಒಪ್ಪಿಕೊಳ್ಳುವಿಕೆಯನ್ನು) ಅರುಹನ್ನು ಕೇಳುವವರೆಗೆ ಮತ್ತು ಮನಸ್ಸಾಕ್ಷಿಯ ಬೆಳ ವಣಿಗೆಯಾಗುವವರೆಗೆ ಮಾತ್ರ ಅತೀ ಕೆಟ್ಟದ್ದಾಗುವುದು. ಈ ತತ್ವಗಳು ಮನೆಯಲ್ಲಿ ಬೋಧಿಸಲ್ಪಡುವದಿಲ್ಲ, ಮತ್ತು ಅವು ಶಾಲೆಯಲ್ಲಿ ಕಾನೂನಿಗೆ ವಿರುದ್ಧವಾದವುಗ ಳಾಗಿರುತ್ತವೆ! ಅನೇಕ ಸಂಗತಿಗಳನ್ನು ನಾನು ತಿಳಿದಿರುವದಿಲ್ಲ, ಆದರೆ ಎರಡು ಸಂಗತಿಗ ಳನ್ನು ನಾನು ಬಲ್ಲವನಾಗಿರುತ್ತೇನೆ: (1) ಶಾಲೆಯಲ್ಲಿ "ಗುಂಡಿನ ಸುರಿಮಳೆ ಮಾಡುವವರು" ತಪ್ಪಾದದ್ದರಿಂದ ಸರಿಯಾದದ್ದನ್ನು ಬೋಧಿಸಲ್ಪಟ್ಟಿರುವದಿಲ್ಲ, ಮತ್ತು (2) ಅವರು ಕ್ರೈಸ್ತ ಮನಸ್ಸಾಕ್ಷಿಯನ್ನು ಬೆಳಸಿಕೊಂಡಿರುವದಿಲ್ಲ. ತಂದೆ ತಾಯಿಗಳು, ಶಾಲೆಗಳು, ಪಟ್ಟಣಗಳು ಪ್ರತಿಯೊಂದು ಮಗುವಿನಲ್ಲಿ ಒಳ್ಳೇ ಮನಸ್ಸಾಕ್ಷಿಯನ್ನು ಸಿದ್ಧಪಡಿಸತಕ್ಕದ್ದು - ಬೇಗನೇ ಮಾಡುವುದು ಹೆಚ್ಚು ಉತ್ತಮವಾಗಿರುತ್ತದೆ!

"ನಮ್ಮ ಪ್ರಾಣಗಳನ್ನು ಮನೋವಿಜ್ಞಾನದ ಅಂಗಡಿಗೆ ಮಾರಿ ಕೊಂಡಿದ್ದೇವೆ" ಮನೋವಿಜ್ಞಾನದಿಂದ ನಾವು ನಡಿಸಲ್ಪಡುತ್ತಿದ್ದೇವೆ, ದೈವಜ್ಞಾನ ಶಾಸ್ತ್ರದಿಂದ ಅಲ್ಲ. ಮನೋವಿಜ್ಞಾನವು ಪಾಪದ ವಾಸ್ತವಿಕತೆಯನ್ನು ಖಂಡಿಸುತ್ತದೆ; ಮನೋವಿಜ್ಞಾನಕ್ಕೆ ಮನಸ್ಸಾಕ್ಷಿಗಾಗಿ ಸ್ಥಾನವಿರುವದಿಲ್ಲ. ಮನೋವಿಜ್ಞಾನವು ಜೀವನದಲ್ಲಿ ಎಲ್ಲಾ ನಿರ್ಣಾಯಕ ಕ್ಷೇತ್ರಗಳಲ್ಲಿ ಸೋತು ಹೋಗುತ್ತದೆ. ಮನಸ್ಸಾಕ್ಷಿಯು ಶಿಕ್ಷಣಕ್ಕೆ ಮತ್ತು ತತ್ವಜ್ಞಾನಕ್ಕೆ ಒಂದು ಸಮಸ್ಯೆಯಾಗಿರುತ್ತದೆ. "ಮೌಲ್ಯಗಳು" ಈಗ ನೀತಿ ಸೂತ್ರಗಳಿಗೆ ಬದಲಾಗಿ ಇಡಲ್ಪಟ್ಟಿವೆ. ಸಾಂಸ್ಕೃತಿಕ ಮೌಲ್ಯಗಳೂ ಸಹ ಸೋತು ಹೋಗುತ್ತವೆ. ಒಳ್ಳೇ ಮನಸ್ಸಾಕ್ಷಿಯೊಂದಿಗೆ ಮನಸಾಕ್ಷಿಯನ್ನು ನೀವು ಅಲ್ಲಗಳೆಯಲಾರಿರಿ! ಅದು ಅಲ್ಲಿ ಇರುತ್ತದೆ! ಅದನ್ನು ಅಲ್ಲಗಳೆಯಲಾಗುವದಿಲ್ಲ! ಮನಸ್ಸಾಕ್ಷಿಯು ಮನುಷ್ಯನಿಗೆ ದೇವರ

ಉಪ - ಪ್ರತಿನಿಧಿಯಾಗಿರುತ್ತದೆ. ಅದು ತನ್ನ ಅಪ್ಪಣೆಗಳನ್ನು ಆತನಿಂದ ಮಾತ್ರವೇ ತೆಗೆದು ಕೊಳ್ಳುವುದು ಕಡ್ಡಾಯವಾಗಿದೆ. ಮನಸ್ಸಾಕ್ಷಿಯು ದೇವರ ಅಸ್ತಿತ್ವಕ್ಕೆ ಬಲವಾದ ಪುರಾವೆಯಾಗಿದೆ! ಮನಸ್ಸಾಕ್ಷಿಯು ನಮ್ಮ ಅತಿದೊಡ್ಡ ಸ್ನೇಹಿತನಾಗಬಹುದು ಇಲ್ಲವೇ ಅತೀ ಕೆಟ್ಟ ವೈರಿಯಾಗಬಹುದು. ಮನಸ್ಸಾಕ್ಷಿಯು ಸತ್ತುಹೋಗುವಾಗ, ನಿರೀಕ್ಷೆಯು ಮರೆಯಾಗಿ ಹೋಗುವುದು. ದೇಹದಿಂದ ಭಾವೋದ್ವೇಗಗಳು ಹೊರಟು ಬರುವಂತೆ ಮನಸ್ಸಾಕ್ಷಿಯು ಅಂತರಂಗದಿಂದ ಹೊರಟು ಬರುವುದು. ಮನಸ್ಸಾಕ್ಷಿಯು ಆಳುವಿಕೆಯು ಶರೀರದ ಆಶೆಗಳ ಮೇಲೆ ಆತ್ಮದ ಆಳಿಕೆಯಾಗಿರುತ್ತದೆ. ದೇವರೊಂದಿಗೆ ನಮ್ಮ ಅನುದಿನದ ನಡೆಯುವಿಕೆಯು “ಮನಸ್ಸಾಕ್ಷಿಯ ನಡೆಯಾಗಿದೆ.”

ಒಬ್ಬ ವಯಸ್ಸಾದ ಭಾರತೀಯನು ಅದನ್ನು ಅತ್ಯುತ್ತಮವಾಗಿ ವ್ಯಕ್ತಪಡಿಸಿದ್ದಾನೆ. ತನ್ನನ್ನು ನಿಯಂತ್ರಿಸಲು ಕಚ್ಚಾಡುತ್ತಿರುವ ಎರಡು ನಾಯಿಗಳು ತನ್ನೊಳಗೆ ಇದ್ದವೆಂದು ಅವನು ಹೇಳಿದನು. ಹಾದು ಹೋಗುವವನು, “ಯಾವುದು ಗೆಲ್ಲುತ್ತದೆ?” ಎಂದು ಕೇಳಿದನು. “ ‘ಹೋಗು ಅವನನ್ನು ಹಿಡಿದುಕೋ’ ಎಂದು ನಾನು ಹೇಳುವಂಥದ್ದು” ಎಂದು ವಯಸ್ಸಾದ ಭಾರತೀಯನು ಉತ್ತರ ಕೊಟ್ಟನು!

## ಮನಸ್ಸಾಕ್ಷಿಯು ಏನಾಗಿರುವದಿಲ್ಲ

(1) ಮನಸ್ಸಾಕ್ಷಿಯು ಒಂದು ನಿಯಮ, ಮಾದರಿ ಇಲ್ಲವೇ ಒಂದು ಮಟ್ಟವಾಗಿರುವದಿಲ್ಲ. ಇಲ್ಲಿ ನಮ್ಮ ಅತಿದೊಡ್ಡತಪ್ಪು ತಿಳುವಳಿಕೆ ಇರುತ್ತದೆ. ಯಾವುದು ಸರಿಯಾಗಿದೆ ಇಲ್ಲವೇ ಯಾವುದು ತಪ್ಪಾಗಿದೆ ಎಂಬುದನ್ನು ನಮ್ಮ ಮನಸ್ಸಾಕ್ಷಿ ನಮಗೆ ಹೇಳುವದಿಲ್ಲ. ಮನಸ್ಸಾಕ್ಷಿಯು ಒಂದು ಮಾರ್ಗದರ್ಶಿಯಾಗಿರುವದಿಲ್ಲ; ಅದು ಚುಚ್ಚುಗೋಲು ಆಗಿದೆ! ಮನಸ್ಸಾಕ್ಷಿಯು ಒಳ್ಳೆಯದನ್ನು ಪ್ರೇರೇಪಿಸುತ್ತದೆ ಮತ್ತು ನಾವು ಪಾಪಮಾಡುವಾಗ ನಮ್ಮನ್ನು ಹಿಂಸಿಸುತ್ತದೆ. “ನನ್ನ ಪಾಪವು ಯಾವಾಗಲೂ ನನ್ನ ಮುಂದೆ ಇದೆ” ಎಂದು (ಕೀರ್ತನೆ 51:3ಬಿ) ದಾವೀದನು ಹೇಳಿದನು. ಮನಸ್ಸಾಕ್ಷಿಯು ನಮ್ಮೊಳಗೆ “ತಕ್ಕದ್ದು” ಆಗಿದೆ. ಮನಸ್ಸಾಕ್ಷಿಯು ನಾವು ಸರಿಯಾದದ್ದನ್ನು ಮಾಡತಕ್ಕದ್ದು ಎಂದು ನಮಗೆ ಹೇಳುತ್ತದೆ, ಆದರೆ ಯಾವುದು ಸರಿಯಾಗಿದೆ ಎಂದು ನಮಗೆ ಹೇಳುವದಿಲ್ಲ. ಈ ಮಾದರಿಯು - ಧರ್ಮಶಾಸ್ತ್ರವು, ಮಟ್ಟವು - ದೇವರ ವಾಕ್ಯ (ಬೈಬಲ್) ಆಗಿದೆ. ಒಪ್ಪಿಗೆ ಕೊಡುವಂಥ ಮನಸ್ಸಾಕ್ಷಿಯಂತೆ ಯಾವುದೂ ಕಂಪನಗೊಳಿಸುವದಿಲ್ಲ; ಅಪರಾಧಿ ಮನಸ್ಸಾಕ್ಷಿಗಿಂತ ಹೆಚ್ಚಾಗಿ ಯಾವುದೂ ಖಂಡಿಸುವದಿಲ್ಲ. ಮನಸ್ಸಾಕ್ಷಿಯು ನಮ್ಮ “ನೈತಿಕ ಪೋಲಿಸ್” ಆಗಿದೆ. “ಅದು ತಪ್ಪಾಗಿತ್ತು!” ಎಂದು ತೀರ್ಪುಕೊಡುತ್ತ, ಮನಸ್ಸಾಕ್ಷಿಯು “ಅದರ ಬಗ್ಗೆ ಏನನ್ನಾದರೂ ಮಾಡು!” ಎಂದೂ ಕೂಗುತ್ತದೆ. ಮನಸ್ಸಾಕ್ಷಿಯು ನಿಯಮವಾಗಿರುವದಿಲ್ಲ, ಇಲ್ಲವೇ ನಿಯಮಗಳನ್ನು ಸೃಷ್ಟಿಸುವದಿಲ್ಲ. ಹೀಗಿದ್ದರೂ ಮನಸ್ಸಾಕ್ಷಿಯು ನಿಯಮವನ್ನು ಮತ್ತು ನಿಯಮದ ತಿಳುವಳಿಕೆಯನ್ನು ಮುಂದಾಗಿ ಹೇಳುತ್ತದೆ. ನಿಯಮವು ಬಂಧನಕಾರಿಯೆಂದು ಮನುಷ್ಯನು ಗುರುತಿಸಿಕೊಳ್ಳುವಾಗ, ಆಗ ಮನಸ್ಸಾಕ್ಷಿಯು ಅದಕ್ಕೆ ತಕ್ಕಂತೆ ಪ್ರತಿಕ್ರಿಯೆ ತೋರಿಸುವುದು. ಮನಸ್ಸಾಕ್ಷಿಯು ಒಂದು ನಿಜಾಂಶವಾಗಿದೆ.

ಮನಸ್ಸಾಕ್ಷಿಗೆ ದ್ವಂದ್ವ ಪಾತ್ರಗಳಿವೆ - ಕಾನೂನನ್ನು ಮಾಡುವಂಥದ್ದು ಮತ್ತು ನ್ಯಾಯತೀರ್ಪು ಕೊಡುವಂಥದ್ದು. ಅದರ ಕಾನೂನು ಮಾಡುವ ಪಾತ್ರದಲ್ಲಿ, ಮನಸ್ಸಾಕ್ಷಿಯು ಒಂದು ಕಾರ್ಯದ ಸರಿಯಾಗಿರುವಿಕೆಯ ಇಲ್ಲವೇ ತಪ್ಪಾದದ್ದರ ಮೇಲೆ ತೀರ್ಮಾನಿಸುತ್ತದೆ. ಇದು ನಿಯಮ, ಜ್ಞಾನ, ಮತ್ತು ತಿಳುವಳಿಕೆಯ ಮೇಲೆ ಅವಲಂಬಿಸಿರುತ್ತದೆ. ನ್ಯಾಯತೀರ್ಪು ಕೊಡುವ ಪಾತ್ರದಲ್ಲಿ, ಮನಸ್ಸಾಕ್ಷಿಯು

ಕ್ಷಮಿಸುತ್ತದೆ ಇಲ್ಲವೇ ದೂರುತ್ತದೆ. ಇದು ನಮ್ಮ ಭಾವನೆಗಳನ್ನು ಒಳಗೊಂಡಿರುತ್ತದೆ. ದಾವೀದನ ಹೃದಯವು (ಮನಸ್ಸಾಕ್ಷಿಯು) ಅವನು ವ್ಯಭಿಚಾರ ಮಾಡಿದ್ದರಿಂದ ಮತ್ತು ಕೊಲೆ ಮಾಡಿದ್ದರಿಂದ ಅವನನ್ನು ಜಜ್ಜಿತು (1 ಸಮುವೇಲ 24:5; 2 ಸಮುವೇಲ 11:14, 15; 12:9; 24:10). ದೇವರಿಗೆ ದಾವೀದನ ಕೂಗು ಶುದ್ಧ ಹೃದಯಕ್ಕಾಗಿ, ನೂತನ ಮತ್ತು ಸರಿಯಾದ ಆತ್ಮಕ್ಕಾಗಿತ್ತು (ಕೀರ್ತನೆ 51:10). ಮನಸ್ಸಾಕ್ಷಿಗೆ ವಿರುದ್ಧವಾಗಿ ವರ್ತಿಸುವುದು ಯಾವಾಗಲೂ ತಪ್ಪಾಗಿರುತ್ತದೆ (ರೋಮಾಪುರ 14:23).

(2) ಮನಸ್ಸಾಕ್ಷಿಯು ಯಾವಾಗಲೂ ಸುರಕ್ಷಿತವಾದ ಮಾರ್ಗದರ್ಶಿಯಾಗಿರುವದಿಲ್ಲ. ಪೌಲನು ಸಭೆಗೆ ವಿರುದ್ಧವಾಗಿ ಅನಾಹುತವನ್ನು ವ್ಯಕ್ತಪಡಿಸಿದನು; ಅವನು ಕ್ರಿಸ್ತನನ್ನು ಹಿಂಸೆಪಡಿಸಿದನು ಮತ್ತು ಸ್ತೆಫನನಿಗೆ ಕಲ್ಲೆಸೆಯುವಾಗ ಭಾಗವಹಿಸಿದನು. ಇವೆಲ್ಲವೂ ಒಳ್ಳೆಯ ಮನಸ್ಸಾಕ್ಷಿಯಲ್ಲಿ ಮಾಡಲ್ಪಟ್ಟಿತು (ಅಪೊಸ್ತಲರ ಕೃತ್ಯಗಳು 23:1). ನೀನು ನಿನ್ನ ಮನಸ್ಸಾಕ್ಷಿಯನ್ನು ಬದಲಾಯಿಸಲಾರಿ; ಪೌಲನು ಎಂದೂ ತನ್ನ ಮನಸ್ಸಾಕ್ಷಿಯನ್ನು ಬದಲಾಯಿಸಲಿಲ್ಲ. ನೀನು ನಿನ್ನ ಮಾಹಿತಿಯನ್ನು ನಿನ್ನ ಜ್ಞಾನವನ್ನು ಮತ್ತು ನಿನ್ನ ದೃಢ ನಿಶ್ಚಯವನ್ನು ಬದಲಾಯಿಸಬಹುದು. ಪೌಲನು ಚೆನ್ನಾಗಿ ಕಲಿತುಕೊಂಡಂತೆ, ಅವನ ಮನಸ್ಸಾಕ್ಷಿಯು ಅವನನ್ನು ಬದಲಾಯಿಸಿತು. ಮನಸ್ಸಾಕ್ಷಿಯು ಸತ್ಯವನ್ನು ತಪ್ಪಾಗಿ ಮಾಡಲಾರದು; ಇಲ್ಲವೇ ತಪ್ಪನ್ನು ಸತ್ಯವನ್ನಾಗಿ ಮಾಡಲಾರದು. ಮನಸ್ಸಾಕ್ಷಿಯು ಬಹಳ ಪರಿಣಾಮಕಾರಿಯಾದ ಮಾರ್ಗದರ್ಶಿಯಾಗಿರುವುದೆಂದು ಬೇರೆ ಮಾತುಗಳಲ್ಲಿ ಹೇಳಬಹುದು. ಅಗಾಧವಾದ ನಂಬಿಕೆಯಲ್ಲಿ, ಕೆಲವು ತಾಯಂದಿರು, ಒಳ್ಳೇ ಮನಸ್ಸಾಕ್ಷಿಯಿಂದ, ತಮ್ಮ ಶಿಶುಗಳನ್ನು ಮೊಸಳೆಗಳಿಗೆ ಎಸೆದರು. ಮನಸ್ಸಾಕ್ಷಿಯು ರಕ್ಷಿಸುವದಿಲ್ಲ - ರಕ್ಷಿಸಲಾರದು, ಶುದ್ಧ ಮನಸ್ಸಾಕ್ಷಿಯು ಸರಿಯಾಗಿರುವದೆಂಬ ನಿಶ್ಚಿತತೆ ಇರುವದಿಲ್ಲ. ಒಬ್ಬನ ಮನಸ್ಸಾಕ್ಷಿಗೆ ವಿರುದ್ಧವಾಗಿ ಹೋಗುವುದು ಯಾವಾಗಲೂ ತಪ್ಪಾಗಿರುವಾಗ, ಮನಸ್ಸಾಕ್ಷಿಯನ್ನು ಅನುಸರಿಸುವುದು ಯಾವಾಗಲೂ ಸರಿಯಾಗಿ ಇರುವದಿಲ್ಲ. ಮನಸ್ಸಾಕ್ಷಿಯು ನಮ್ಮ ಮಾಹಿತಿಯ ನಮ್ಮ ದೃಢ ನಿಶ್ಚಯದ ಕರುಣೆಯಲ್ಲಿರುತ್ತದೆ. ಮನಸ್ಸಾಕ್ಷಿಗೆ ಪರಿಶುದ್ಧ ಬರಹಗಳೊಂದಿಗೆ ಮತ್ತು ಪ್ರಜ್ಞೆಯೊಂದಿಗೆ ಯೋಗ್ಯವಾಗಿ ಮಾಹಿತಿ ಒದಗಿಸತಕ್ಕದ್ದು. ದಾವೀದನು ತಾನು ಪಾಪ ಮಾಡಬಾರದಂತೆ ದೇವರ ವಾಕ್ಯವನ್ನು ತನ್ನ ಹೃದಯದಲ್ಲಿ ಸಂಗ್ರಹಿಸಿಟ್ಟುಕೊಂಡನು (ಕೀರ್ತನೆ 119:11). ಅವುಗಳ ಮೇಲೆ ಆತುಕೊಳ್ಳುವದರಿಂದ ದೇವರ ಆಜ್ಞೆಗಳನ್ನು ನೀವು ಮುರಿಯಲಾರಿರಿ.

ನಾನು ಒಬ್ಬ ವಿಮಾನಚಾಲಕನು. ವಿಮಾನಗಳಲ್ಲಿ ದಿಕ್ಸೂಚಿಗಳನ್ನು ಉಪಯೋಗಿಸುತ್ತಾರೆ, ಆದರೆ ದಿಕ್ಸೂಚಿಯು ಹಿಂದೋಡಬಹುದು, ಮುಂದೋಡಬಹುದು ಇಲ್ಲವೇ ಹಿಂದೆ ಬೀಳಬಹುದು. ಡಿಜಿ (ಡೈರೆಕ್ಷನಲ್ ಗೀರೋ) ಯೊಂದಿಗೆ ಒಂದು ವಿಮಾನದಲ್ಲಿ ನೀವು ಯಾನ ಮಾಡಬಹುದು. ಸಮನಾದ ಯಾನದಲ್ಲಿ ದಿಕ್ಸೂಚಿಯಿಂದ ಡಿಜಿಯನ್ನು ಸರಿಯಾಗಿಡಬಹುದು. ಪ್ರತಿ ಹದಿನೈದು ನಿಮಿಷಗಳಿಗೆ ದಿಕ್ಸೂಚಿಗೆ ಹೊಂದುವಂತೆ ಡಿಜಿಯನ್ನು ಪುನಃ ಏರ್ಪಡಿಸುವಿರಿ. ಅದೇ ರೀತಿಯಲ್ಲಿ, ನಾವು ನಮ್ಮ ಮನಸ್ಸಾಕ್ಷಿಗಳಿಂದ ಜೀವಿಸುವೆವು; ಆದಾಗ್ಯೂ, ಅನುದಿನವೂ ಮನಸ್ಸಾಕ್ಷಿಯು ದೇವರ ವಾಕ್ಯಕ್ಕೆ ಹೊಂದಿಕೊಳ್ಳುವಂತೆ ಸರಿಪಡಿಸಲ್ಪಡತಕ್ಕದ್ದು. ಮನಸ್ಸಾಕ್ಷಿಯು ಒತ್ತಾಯ ಮಾಡುತ್ತದೆ, ಆದರೆ ನಿರ್ಬಂಧ ಪಡಿಸುವದಿಲ್ಲ. ಗಡಿಯಾರದಿಂದ ನಮ್ಮ ಜೀವಿತಗಳ ಕಾರ್ಯಕ್ರಮ ರೂಪಿಸಿಕೊಳ್ಳಬಹುದು, ಆದರೆ ಗಡಿಯಾರವು ಇನ್ನೂ ಸೂರ್ಯನಿಂದ ನಿರ್ಧರಿಸಲ್ಪಡುತ್ತದೆ. ಮನಸ್ಸಾಕ್ಷಿಯು ನಮ್ಮ ಚಿತ್ತಕ್ಕೆ ಉತ್ತರ ಕೊಡುವದಿಲ್ಲ.

(3) ಮನಸ್ಸಾಕ್ಷಿಯು "ಮನುಷ್ಯನಲ್ಲಿ ದೇವರ ಧ್ವನಿಯಾಗಿರುವದಿಲ್ಲ" ಆ ಧ್ವನಿಯು ಬೈಬಲ್ ಆಗಿದೆ. ಮನಸ್ಸಾಕ್ಷಿಯು "ಮನುಷ್ಯನಲ್ಲಿ ಮನುಷ್ಯನ ಧ್ವನಿಯಾಗಿರುತ್ತದೆ."

ನಾವು ಅದಕ್ಕೆ ಆಜ್ಞಾಪಿಸುವದಿಲ್ಲ; ಇದು ನಮಗೆ ಆಜ್ಞಾಪಿಸುತ್ತದೆ. "ಮನಸ್ಸಾಕ್ಷಿಯು ನಮ್ಮೆಲ್ಲರನ್ನೂ ಹೇಡಿಗಳನ್ನಾಗಿ ಮಾಡುತ್ತದೆ" ಎಂದು ಶೇಕ್ಸ್‌ಪಿಯರ್ ಹೇಳಿದ್ದಾನೆ. ನಾವು ಅದರ ಮೇಲೆ ಇದ್ದೇವೆ, ಆದಾಗ್ಯೂ ಅದಕ್ಕೆ ಅಧೀನರಾಗಿದ್ದೇವೆ. ಕಾನೂನು ಏನಾಗಿರಬೇಕೆಂದು ನ್ಯಾಯಾಲಯವು ಹೇಳಲು ಊಹಿಸುವುದಿಲ್ಲ. ಇದು ಕಾನೂನಿನ ಕಾರ್ಯವಾಗಿದೆ. ಕಾನೂನು ಏನು ಹೇಳಿತು ಎಂಬುದನ್ನು ನಿರ್ಧರಿಸಲು ನ್ಯಾಯಾಲಯವು ಹುಡುಕುತ್ತದೆ ಮತ್ತು ಅದರಂತೆ ಕಾರ್ಯ ಮಾಡುತ್ತದೆ. ಮಾನವನ ವಿವೇಚನೆಯು ಕಾನೂನನ್ನು ನಿರ್ಧರಿಸುತ್ತದೆ; ಮಾನವನ ಮನಸ್ಸಾಕ್ಷಿಯು ಅದನ್ನು ಮಾಡಲು ಹುಡುಕುತ್ತಾನೆ. ಕಾನೂನು ಅಥವಾ ನ್ಯಾಯಾಲಯವು ಬಲಹೀನವಾ ದದ್ದಾಗುತ್ತದೆ; ನ್ಯಾಯಾಲಯವಿಲ್ಲದೇ ಕಾನೂನು ಅಷ್ಟೇ ಬಲವಿಲ್ಲದ್ದಾಗುತ್ತದೆ.

ಹೊಳೆಯುವದಕ್ಕೆ ಯಾವುದೇ ಮನವಿಯು, ಅದು ಮನಸ್ಸಾಕ್ಷಿಗೆ ಸಂಬಂಧಿಸಲ್ಪಡದಿದ್ದರೆ, ಅದು ವ್ಯರ್ಥವಾದದ್ದಾಗುತ್ತದೆ. ಸೈತಾನನೂ ಸಹ ಸರಿಯಾದದ್ದರ ಮತ್ತು ತಪ್ಪಾದದ್ದರ ಮಧ್ಯದಲ್ಲಿ ಭಿನ್ನತೆಯನ್ನು ತಿಳಿದಿರುತ್ತಾನೆ. ಸೈತಾನನು ಮೂಕನಾಗಿದ್ದಾನೆ ಎಂದು ಯಾರೂ ಎಂದೂ ದೂರಿರುವದಿಲ್ಲ! ಮನಸ್ಸಾಕ್ಷಿಯು "ಸಹಜ ಶಕ್ತಿ, ಬಲ ಇಲ್ಲವೇ ಒಬ್ಬನ ಸ್ವಂತ ಕೃತ್ಯದ ಸ್ವಭಾವವನ್ನು ತೀರ್ಮಾನಿಸುವ ಆಂತರಿಕ ತತ್ವ" ಆಗಿರುತ್ತದೆ. ಮನಸ್ಸಾಕ್ಷಿಯು ತನ್ನಷ್ಟಕ್ಕೆ ನೈತಿಕ ಜೀವಿಯಂತೆ ಮನುಷ್ಯನು ತನ್ನಷ್ಟಕ್ಕೆ ಮಾತಾಡುವುದಾಗಿದೆ, ಆದುದರಿಂದ ಒಬ್ಬ ಮನುಷ್ಯನ ಮನಸ್ಸಾಕ್ಷಿಯು ಇನ್ನೊಬ್ಬನ ದೃಢನಿಶ್ಚಯದ ಮೇಲೆ ಪ್ರತಿಕ್ರಿಯೆ ಮಾಡಲಾರದು, ಆದರೆ ತನ್ನ ಸ್ವಂತದ ಮೇಲೆ ಮಾತ್ರ ಮಾಡಬಹುದು. ಈ ತತ್ವದಿಂದ ಅನ್ಯರು "ತಾವೇ ತಮಗೆ ಧರ್ಮ ಪ್ರಮಾಣವಾಗಿದ್ದಾರೆ" (ರೋಮಾಪುರ 2:14ಬಿ). ಹಿಂದಿಟ್ಟಿದ್ದರೂ ದುಷ್ಟನು ಹೆದರಿ ಓಡುವನು (ಜ್ಞಾನೋಕ್ತಿ 28:1). ಪ್ರತಿಯೊಂದು ಯೋಚನೆಯನ್ನು ಕ್ರಿಸ್ತನಿಗೆ ವಿಧೇಯವಾಗುವಂತೆ ತರಲು ಕ್ರೈಸ್ತರು ಆಜ್ಞಾಪಿಸಲ್ಪಟ್ಟಿದ್ದಾರೆ (2 ಕೊರಿಂಥ 10:5). ಮನಸ್ಸಾಕ್ಷಿಯು ದೇವರ ಕಡೆಗಿರುವ ಮನುಷ್ಯನ ಮನೋಭಾವನೆಯನ್ನು ಪ್ರತಿಬಿಂಬಿಸುತ್ತದೆ ಮತ್ತು ತನ್ನ ಕಡೆಗೆ ಇರುವ ದೇವರ ಮನೋಭಾವನೆಯ ಅರುಹನ್ನು ಹೊಂದುವಂತೆ ಅವನು ಮಾಡುತ್ತಾನೆ. ಮನಸ್ಸಾಕ್ಷಿಯು ತನ್ನ ತೀರ್ಪಿನಲ್ಲಿ ಖಂಡಿತವಾದದ್ದಾಗಿರುತ್ತದೆ. ಒಂದು ಕಾರಣವನ್ನು ಕೊಡದೇ ಅದು ನ್ಯಾಯತೀರ್ಪನ್ನು ವ್ಯಕ್ತಪಡಿಸುತ್ತದೆ. ಮನಸ್ಸಾಕ್ಷಿಯು ತನ್ನ ತೀರ್ಪಿನಲ್ಲಿ ಪರಿಪೂರ್ಣವಾದದ್ದಾಗಿರುತ್ತದೆ. ಅದರಲ್ಲಿ ವ್ಯವಹರಿಸುವದಕ್ಕಾಗಲೀ ಇಲ್ಲವೇ ಒಪ್ಪಂದ ಮಾಡಿಕೊಳ್ಳುವದಾಗಲೀ ಇರುವದಿಲ್ಲ. ಮನಸ್ಸಾಕ್ಷಿಯು ತನ್ನ ತೀರ್ಪಿನಲ್ಲಿ ವೈಯಕ್ತಿಕವಾದದ್ದಾಗಿರುತ್ತದೆ. ಮನಸ್ಸಾಕ್ಷಿಗೆ ಲಂಚಕೊಡಲಿಕ್ಕಾಗುವದಿಲ್ಲ. ನಿಮ್ಮ ಮನಸ್ಸಾಕ್ಷಿಯನ್ನು ಎಂದೂ ಉಲ್ಲಂಘಿಸಬೇಡಿರಿ. ಯಾವಾಗಲೂ ಜ್ಞಾಪಿಸಿಕೊಳ್ಳಿರಿ: ಒಬ್ಬ ಕ್ರೈಸ್ತನಂತೆ, ನೀವು ಎಂದೂ ಕೆಲಸವಿಲ್ಲದವರಾಗಿರುವದಿಲ್ಲ.

## ಮನಸ್ಸಾಕ್ಷಿ ಮತ್ತು ಪರಿಶುದ್ಧ ಬರಹಗಳು

ಹಳೇ ಒಡಂಬಡಿಕೆಯು "ಮನಸ್ಸಾಕ್ಷಿ" ಎಂಬ ನಿಶ್ಚಿತವಾದ ಪದವನ್ನು ಉಪಯೋಗಿಸುವದಿಲ್ಲ. ಆದಾಗ್ಯೂ ಅದು, "ಹೃದಯ" ಎಂದು ಕರೆಯಲ್ಪಡುವದರ ಭಾಗವಾಗಿದೆ. ಮನಸ್ಸಾಕ್ಷಿಯ ನಿಮಿತ್ತವಾಗಿ ದಾವೀದ, ಇಸ್ರಾಯೇಲ, ಮತ್ತು ಅನ್ಯರೂ ಸಹ ದೇವರ ಮುಂದೆ ಮಾನಸಾಂತರ ಪಟ್ಟರು. ಇಂದು ಜನರು ಮನಸ್ಸಾಕ್ಷಿಯನ್ನು ಕಡೆಗಣಿಸುತ್ತಾರೆ ಇಲ್ಲವೇ ಅಲ್ಲಗಳೆಯುತ್ತಾರೆ. ನಿಮ್ಮ ಹೊಸ ಒಡಂಬಡಿಕೆಯ ಅಧ್ಯಯನ ಮಾಡಿರಿ. ಮನಸ್ಸಾಕ್ಷಿಗೆ ಸಂಬಂಧಿಸಿದ ಸೂಚಕಗಳ ಸಂಖ್ಯೆಯಿಂದ (ಮೂವತ್ತೊಂದು) ನೀವು ಆಶ್ಚರ್ಯಪಡುವಿರಿ. ಹೀಗಿದ್ದರೂ ನಿರ್ದಿಷ್ಟವಾದ ಪದವು

ಸುವಾರ್ತೆಗಳಲ್ಲಿ ಒಮ್ಮೆ ಮಾತ್ರ ಕಂಡು ಬರುತ್ತದೆ (ಯೋಹಾನ 8:9; KJV). ಈ ಸಂಗತಿಯು ಆಕರ್ಶಿಸುತ್ತದೆ. ಈ ಪ್ರತ್ಯೇಕವಾದ ಹಿನ್ನೆಲೆಯು "ವ್ಯಭಿಚಾರದಲ್ಲಿ ಸಿಕ್ಕಿಬಿದ್ದ ಮಹಿಳೆಯನ್ನು" ಒಳಗೊಂಡಿರುತ್ತದೆ. ಮನಸ್ಸಾಕ್ಷಿಯ ನಿಮಿತ್ತ ದೂರು ತಂದವರು ಯೇಸುವಿನ ನೋಟದಿಂದ. ಮೌನವಾಗಿ ನಡೆದು ಹೋಗುತ್ತಾರೆ. ಪರ್ವತ ಪ್ರಸಂಗವನ್ನು ವಿಶೇಷವಾಗಿ ಧನ್ಯವಾಚಕಗಳನ್ನು ಓದಿರಿ. ಯೇಸು ಮತ್ತು ಧನ್ಯವಾಚಕಗಳು ಒಂದೇ ಯಾಗಿರುತ್ತವೆ. ಧನ್ಯವಾಚಕಗಳು ಯೇಸುವಾಗಿರುತ್ತವೆ, ಆತ್ಮಿಕತೆಯಾಗಿರುತ್ತವೆ ಮತ್ತು ಮನಸ್ಸಾಕ್ಷಿಯಾಗಿರುತ್ತವೆ.

"ಮನಸ್ಸಾಕ್ಷಿ" ಎಂಬ ಪದವು ಬೈಬಲಿನಲ್ಲಿ ಕೇವಲ ಮೂರು ಜನ ಬರಹಗಾರರಿಂದ ಅಂದರೆ: ಯೋಹಾನ, ಪೇತ್ರ ಹಾಗೂ ಪೌಲನಿಂದ ಉಪಯೋಗಿಸಲ್ಪಟ್ಟಿದೆ. ಪೌಲನು ಪದವನ್ನು ಇಪ್ಪತ್ತು ಸಲ (ಮಾಂಸ ತಿನ್ನುವದರ ಬಗ್ಗೆ ಎಂಟು ಸಲ) ಉಪಯೋಗಿ ಸಲ್ಪಟ್ಟಿದ್ದಾನೆ. 1 ಪೇತ್ರ 3:15-21ರಲ್ಲಿ ಪೇತ್ರನ ಮಾತುಗಳು ನಮ್ಮನ್ನು ಎಳೆದು ಕೊಳ್ಳುತ್ತವೆ. ಸುವಾರ್ತಾ ಸೇವಾ ಕಾರ್ಯವು ಮನಸ್ಸಾಕ್ಷಿಯಿಂದ ಹೊರಗೆ ಬರುತ್ತದೆ. ಇದು ಸುವಾರ್ತಾ ಸೇವೆಯನ್ನು ಕಾಪಾಡುತ್ತದೆ. ಬಾಪ್ತಿಸ್ಮವು ಮನಸ್ಸಾಕ್ಷಿಯ ಒಂದು ಕೃತ್ಯವಾಗಿದೆ. ಮನುಷ್ಯನ ಪ್ರತಿಭೆಯುಳ್ಳ ಕಾರ್ಯವಾಗಿರುವದಿಲ್ಲ. ಕನಸುಗಳು, ಭಾವನೆಗಳು, "ನಾನು ಹಾಗೆ ಯೋಚಿಸುತ್ತೇನೆ" ಎಂಬವುಗಳು ಎಣಿಸಲ್ಪಡುವದಿಲ್ಲ. ಮನಸ್ಸಾಕ್ಷಿಯು ಬಾಪ್ತಿಸ್ಮಕ್ಕೆ ಮೌಲ್ಯಕೊಡುತ್ತದೆ.

ಬಹುಶಃ ಅತಿದೊಡ್ಡ ಬೈಬಲಿನ ಹೇಳಿಕೆಯು ಇಬ್ರಿಯ 4:12ರಲ್ಲಿ ಕಂಡು ಬರುತ್ತದೆ: "ಯಾಕಂದರೆ ದೇವರ ವಾಕ್ಯವು ಸಜೀವವಾದದ್ದು, ಕಾರ್ಯಸಾಧಕವಾದದ್ದು, ಯಾವ ಇಬ್ಬಾಯಿಕತ್ತಿಗಿಂತಲೂ ಹದವಾದದ್ದು, ಪ್ರಾಣ ಆತ್ಮಗಳನ್ನೂ ಕೀಲುಮಜ್ಜೆಗ ಳನ್ನೂ ವಿಭಾಗಿಸುವಷ್ಟು ಮಟ್ಟಿಗೂ ತೂರಿ ಹೋಗುವಂಥದು, ಹೃದಯದ ಆಲೋಚನೆಗ ಳನ್ನೂ ಉದ್ದೇಶಗಳನ್ನೂ ವಿವೇಚಿಸುವಂಥದು ಆಗಿದೆ." ಬೇರೆ ಯಾವುದೂ ಮಾಡದಂತೆ ಬೈಬಲು ಆತ್ಮವನ್ನು ಶೋಧಿಸುತ್ತದೆ. ದೇವರ ವಾಕ್ಯವು ದೇವರನ್ನು ನಮ್ಮ ಬಳಿಗೆ, ನಮ್ಮನ್ನು ದೇವರ ಬಳಿಗೆ ಮತ್ತು ನಮ್ಮನ್ನು ನಮ್ಮ ಬಳಿಗೆ ತರುತ್ತದೆ.

ಬೈಬಲು ಪ್ರಕಟಿಸುತ್ತದೆ:

... ಒಂದು ಬಲಹೀನ ಮನಸ್ಸಾಕ್ಷಿಯನ್ನು (1 ಕೊರಿಂಥ 8:7)
... ಒಂದು ಮಲಿನವಾದ ಮನಸ್ಸಾಕ್ಷಿಯನ್ನು (ತೀತ 1:15)
... ಒಂದು ಶುದ್ಧವಾದ ಮನಸ್ಸಾಕ್ಷಿಯನ್ನು (1 ತಿಮೊಥೆ 3:9)
... ಒಂದು ಒಳ್ಳೆಯ ಮನಸ್ಸಾಕ್ಷಿಯನ್ನು (ಇಬ್ರಿಯ 13:18)
... ಒಂದು ಬರೆಯುಳ್ಳ ಮನಸ್ಸಾಕ್ಷಿಯನ್ನು (1 ತಿಮೊಥೆ 4:1-3)
... ಒಂದು ಸಾಕ್ಷಿ ಕೊಡುವ ಮನಸ್ಸಾಕ್ಷಿಯನ್ನು (ರೋಮಾಪುರ 2:15)
... ನಮ್ಮ ಮನಸ್ಸಾಕ್ಷಿಯ ಸಾಕ್ಷಿಯನ್ನು (2 ಕೊರಿಂಥ 1:12)

ಮನಸ್ಸಾಕ್ಷಿಯು ದೇವರ ವಾಕ್ಯದಿಂದ ಪ್ರಮಾಣೀಕರಿಸಲ್ಪಡತಕ್ಕದೆಂಬ ಸ್ಪಷ್ಟವಾದ ನಿರ್ಣಯವಾಗುತ್ತದೆ. ಇದು ಆರ್ಥೊಡಾಕ್ಷಿಯನ್ನು (ಶುದ್ಧವಾದ ಬೋಧನೆ) ಮತ್ತು ಆರ್ಥೊಪ್ರೊಕ್ಸಿಯನ್ನು (ಪರಿಶುದ್ಧ ಜೀವಿತ) ಎರಡನ್ನೂ ಒಳಗೊಂಡಿದೆ.

## ದೃಢನಿಶ್ಚಯದಲ್ಲಿ ಮನಸ್ಸಾಕ್ಷಿ

ಸತ್ಯವನ್ನು ಅಲ್ಲಗಳೆಯುವುದು ಇಲ್ಲವೇ ಕಡೆಗಣಿಸುವುದು ದೃಢನಿಶ್ಚಯವನ್ನು ನಾಶಪಡಿಸುವುದಾಗಿದೆ. ಸತ್ಯವು ವಿಶೇಷವಾದದ್ದಾಗಿರದಿದ್ದರೆ, ಆಗ ದೃಢ ನಿಶ್ಚಯಗಳು ಇರುವುದು ಯಾಕೆ? ಯಾಕೆ ಚಿಂತಿಸಬೇಕು? "ಸತ್ಯವನ್ನು ತಿಳಿದುಕೊಳ್ಳುವಿರಿ; ಮತ್ತು ಸತ್ಯವು ನಿಮ್ಮನ್ನು ಬಿಡುಗಡೆ ಮಾಡುವದು," ಎಂದು ಯೇಸು ಯೋಹಾನ 8:32ರಲ್ಲಿ ಹೇಳಿದನು. ಈ "ಸತ್ಯದಲ್ಲಿಯ" "ಸತ್ಯವನ್ನು" ಯಾವುದೇ ಮನುಷ್ಯನು ತನ್ನ ಸರಿಯಾದ ಮನಸ್ಸಿನಲ್ಲಿ ಆಹ್ವಾನಿಸಲಾರನು ಬೈಬಲು ದೇವರನ್ನು ಜನರನ್ನು ಮತ್ತು ಜೀವವನ್ನು ಕುರಿತು ಅಗಾಧವಾದ ದೃಢ ನಿಶ್ಚಯಗಳನ್ನು ಕೊಡುತ್ತದೆ. ದೃಢನಿಶ್ಚಯಗ ಳೊಂದಿಗೆ ನೀವು ಜೀವಿಸುವಿರಿ ಮತ್ತು ಸಾಯುವಿರಿ. ಮನಸ್ಸಾಕ್ಷಿಯು ಹೇಳಿಕೆಗಳನ್ನು ಕೊಡುತ್ತದೆ ಯಾಕೆಂದರೆ, ಮನಸ್ಸಾಕ್ಷಿಗೆ ದೃಢನಿಶ್ಚಯಗಳಿರುತ್ತವೆ. ದೃಢನಿಶ್ಚಯಗಳು ನಡತೆಯನ್ನು ತೀರ್ಮಾನಿಸುತ್ತವೆ. ದೃಢ ನಿಶ್ಚಯಕ್ಕೆ ಕೃತ್ಯಗಳ ಅವಶ್ಯಕತೆಯಿರುತ್ತದೆ ಮತ್ತು ಕಾರ್ಯಗಳನ್ನು ನಿರ್ದೇಶಿಸುತ್ತದೆ. "ಕ್ರಿಯೆಗಳಿಲ್ಲದಿದ್ದರೆ ನಂಬಿಕೆಯು ತನ್ನಲ್ಲಿ ಜೀವವಿಲ್ಲದ್ದು" ಎಂದು ಯಾಕೋಬ 2:17 ಹೇಳುತ್ತದೆ (ವಚನ 20, 26 ನೋಡಿರಿ). ಕ್ರೈಸ್ತರು ದೃಢನಿಶ್ಚಯಗಳಿಂದ ಜೀವಿಸುತ್ತಾರೆ - "ಆದರಣೆಯ ವಲಯಗಳಿಂದ" ಅಲ್ಲ. ಈ ದಿನಗಳಲ್ಲಿ ಧರ್ಮದಲ್ಲಿ ಮಾಡಿದವುಗಳಲ್ಲಿ ಬಹಳ ಹೆಚ್ಚಾದದ್ದು, "ಆದರಣೆಯ ವಲಯಗಳಿಂದ" ತೀರ್ಮಾನಿಸಲ್ಪಟ್ಟವುಗಳು ಆಗಿವೆ. ಮನಸ್ಸಾಕ್ಷಿಗೆ ತಿಳಿಸಲ್ಪಡತಕ್ಕದ್ದು ತರಬೇತಿ ಕೊಡತಕ್ಕದ್ದು ಮನಸ್ಸಾಕ್ಷಿಯು, ದೇಹದ ಮತ್ತು ಪ್ರಾಣದ ಪ್ರತಿಯೊಂದು ಇತರ ಅಂಗದಂತೆ, ಅಂಗ ಸಾಧನೆಯ ಮುಖಾಂತರ ಬೆಳೆಸಿಕೊಳ್ಳಲ್ಪಡತಕ್ಕದ್ದು.

***ಬನ್ನಿರಿ, ನನ್ನೊಂದಿಗೆ ನಡೆಯಿರಿ.***

---

ಟಿಪ್ಪಣಿ

[1]Erle Stanley Gardner, writer of Perry Mason mystery stories, founded an organization called The Court of Last Resort to help people who are falsely accused of crimes.

© 2009 Truth for Today